747 ಶ್ರೀ ರಾಜಶೇಖರ ಬಸವರಾಜ ಪಾಟೀಲ್ : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೀದರ್ ಜಿಲ್ಲೆಯ ಹುಮ್ನಾಬಾದ್‌ನಲ್ಲಿ ನೂತನ ಬಸ್ ನಿಲ್ದಾಣದ ಕಾಮಗಾರಿಯನ್ನು ಎಂದು ಪ್ರಾರಂಭಿಸಲಾಯಿತು; ಇದು ಯಾವಾಗ ಮುಕ್ತಾಯವಾಗಬೇಕಿತ್ತು; ಇದರ ಅಂದಾಜು ವೆಚ್ಚವೆಷ್ಟು; ಇದುವರೆವಿಗೆ ಇದಕ್ಕೆ ಖರ್ಚು ಮಾಡಿರುವ ಹಣದ ಮೊತ್ತವೆಷ್ಟು;

ಆ) ಈಗ ನಿರ್ಮಾಣ ಕಾಮಗಾರಿ ಯಾವ ಹಂತದಲ್ಲಿದೆ; ಇಲ್ಲಿಯವರೆಗೆ ಯಾವ ಯಾವ ಕೆಲಸಗಳು ಪೂರ್ಣಗೊಂಡಿವೆ; ಬಾಕಿ ಉಳಿದಿರುವ ಕೆಲಸಗಳು ಯಾವುವು; ಈ ಕಾಮಗಾರಿಗಳು ಪೂರ್ಣಗೊಳ್ಳಲು ಅಗತ್ಯವಿರುವ ಹಣವೆಷ್ಟು;

ಇ) ಈ ಬಸ್ ನಿಲ್ದಾಣದ ನಿರ್ಮಾಣ ಕಾಮಗಾರಿಗಳು ಮಂದಗತಿಯಲ್ಲಿ ನಡೆಯುತ್ತಿರಲು ಕಾರಣಗಳೇನು;

ಈ) ಈ ಕಾಮಗಾರಿಗೆ ಹಣದ ಕೊರತೆ ಇದೆಯೇ;

ಉ) ಬಸ್ ನಿಲ್ದಾಣ ನಿರ್ಮಾಣದ ಕಾಮಗಾರಿ ನಿಧಾನವಾಗಿ ಸಾಗುತ್ತಿರುವುದರಿಂದ ಈ ಭಾಗದ ನಾಗರೀಕರಿಗೆ/ಪ್ರಯಾಣಿಕರಿಗೆ ತೊಂದರೆಯಾಗಿದ್ದು, ಶೀಘ್ರವಾಗಿ ಈ ಕಾಮಗಾರಿಯನ್ನು ಪೂರ್ಣಗೊಳಿಸಲು ಸರ್ಕಾರದ ಮುಂದಿರುವ ಕ್ರಮಗಳೇನು?

ಶ್ರೀ ಆರ್.ಅಶೋಕ (ಸಾರಿಗೆ ಸಚಿವರು) :

ಅ) ಕಾಮಗಾರಿಯನ್ನು ದಿನಾಂಕ: 7–1–2008ರಂದು ಪ್ರಾರಂಭಿಸಲಾಗಿದೆ. ದಿನಾಂಕ: 6–4–2009 ರಂದು ಪೂರ್ಣಗೊಳಿಸಬೇಕಾಗಿತ್ತು. ಇದರ ಅಂದಾಜು ಮೊತ್ತ ರೂ.140.00 ಲಕ್ಷಗಳಾಗಿದೆ. ಇಲ್ಲಿಯವರೆಗೆ ರೂ.55.00 ಲಕ್ಷಗಳ ವೆಚ್ಚ ಮಾಡಲಾಗಿರುತ್ತದೆ.

ಆ) ಪ್ರಸ್ತುತ ಮೊದಲ ಮಹಡಿಯ ಕಟ್ಟಡದ ಕಾಮಗಾರಿಯು ಛಾವಣಿ ಮಟ್ಟದವರೆಗೆ ಪೂರ್ಣಗೊಂಡಿದ್ದು, ಟ್ರಸ್‌ಗಳನ್ನು ಅಳವಡಿಸುವ ಕಾಮಗಾರಿ ಪ್ರಗತಿಯಲ್ಲಿರುತ್ತದೆ. ಸದರಿ ಬಸ್‌ನಿಲ್ದಾಣಕ್ಕೆ ಮುಚ್ಚಳ ಒದಿಕೆ ಅಳವಡಿಸಿ ಛಾವಣಿ ಹೊದಿಸುವುದು, ಫಿನಿಶಿಂಗ್ ಕೆಲಸಗಳು ಬಾಕಿ ಉಳಿದಿರುತ್ತದೆ. ಈ ಕಾಮಗಾರಿ ಪೂರ್ಣಗೊಳ್ಳಲು ಇನ್ನು ರೂ.109.00 ಲಕ್ಷಗಳು ಬೇಕಿರುತ್ತವೆ.

ಇ) ಹಾಲಿ ಬಸ್‌ನಿಲ್ದಾಣವನ್ನು ಪ್ರಯಾಣಿಕರಿಗೆ ತೊಂದರೆಯಾಗದಂತೆ ನಿರ್ಮಿಸುತ್ತಿರುವುದರಿಂದ ಬಸ್‌ನಿಲ್ದಾಣದ ಕಾರ್ಯಾಚರಣೆಗೆ ಅಡಚಣೆಯಾಗದಂತೆ ಕ್ರಮ ಕೈಗೊಂಡಿರುವುದರಿಂದ ಹಾಗೂ ಸದರಿ ಬಸ್‌ನಿಲ್ದಾಣದಲ್ಲಿ ವಾಣಿಜ್ಯ ಮಳಿಗೆಗಳಿದ್ದು, ಅವುಗಳನ್ನು ಕಾನೂನಿನ ಪ್ರಕಾರ ತೆರವುಗೊಳಿಸುವಲ್ಲಿ

ಹಾಗೂ ಹಳೆಯ ಕಟ್ಟಡವನ್ನು ಒಡೆದು ಹಾಕುವುದಕ್ಕೆ, ಹರಾಜು ಮಾಡಲು ಹೆಚ್ಚು ಸಮಯ ಬೇಕಾಗಿರುವುದರಿಂದ ಕಾಮಗಾರಿಯಲ್ಲಿ ವಿಳಂಭವಾಗಿರುತ್ತದೆ.

ಈ) ಇಲ್ಲ.

ಉ) ಅತ್ಯಾಧುನಿಕ ಬಸ್ ನಿಲ್ದಾಣ ನಿರ್ಮಿಸುವ ಕಾಮಗಾರಿ ಪ್ರಗತಿಯಲ್ಲಿರುವುದರಿಂದ ತಾತ್ಕಾಲಿಕ ತಂಗುದಾಣವನ್ನು ನಿರ್ಮಾಣ ಮಾಡಿ ಪ್ರಯಾಣಿಕರಿಗೆ ಅವಶ್ಯಕ ಸೌಕರ್ಯಗಳನ್ನು ಒದಗಿಸಲಾಗಿರುತ್ತದೆ.

ಈ ಕಾಮಗಾರಿ ಪ್ರಗತಿಯಲ್ಲಿದ್ದು, ಅಂದಾಜು 3 ತಿಂಗಳಲ್ಲಿ ಪೂರ್ಣಗೊಳಿಸಲು ಕ್ರಮ ತೆಗೆದುಕೊಳ್ಳಲಾಗಿರುತ್ತದೆ.

542 ಶ್ರೀ ರೋಷನ್ ಬೇಗ್ : ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಡೈರೆಕ್ಟರ್ ಜನರಲ್ ಆಫ್ ಪೊಲೀಸ್‌ರವರ ಕಛೇರಿಯಲ್ಲಿ ರೂ.50 ಲಕ್ಷ ನಾಪತ್ತೆಯಾಗಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ ಪೂರ್ಣ ಮಾಹಿತಿಯನ್ನು ಒದಗಿಸುವುದು;

ಶ್ರೀ ಡಾ.ವಿ.ಎಸ್.ಆಚಾರ್ಯ (ಗೃಹ ಸಚಿವರು) :

ಅ) ಇಲ್ಲ. ಆದರೆ ದಿನಾಂಕ 11ನೇ ಏಪ್ರಿಲ್ 2009ರ ಟೈಮ್ಸ್ ಆಫ್ ಇಂಡಿಯಾ ದಿನಪತ್ರಿಕೆಯ ವರದಿಯ ಪ್ರಕಾರ ಡೈರೆಕ್ಟರ್ ಜನರಲ್ ಆಫ್ ಪೊಲೀಸ್‌ರವರ ಕಛೇರಿಯಲ್ಲಿ 2004ನೇ ಇಸವಿಯಲ್ಲಿ ಇಂಟಲಿಜೆನ್ಸ್ ಬ್ಯೂರೋದಿಂದ ಬಂದ 50 ಲಕ್ಷ ರೂಗಳು ನಾಪತ್ತೆಯಾದ ಬಗ್ಗೆ ಒಂದು ಮಾಹಿತಿ ಪ್ರಕಟವಾಗಿತ್ತು.

English version

No. But in the Times of India dated 11th April 2009 there was a report that a sum of Rs.50.00 lakhs received from Intelligence Bureau was missing f in the Office of the Director General of Police during 2004.

ಆ) 2004ನೇ ಇಸವಿಯಲ್ಲಿ ಇಂಟೆಲಿಜೆನ್ಸ್ ಬ್ಯೂರೋದಿಂದ 50 ಲಕ್ಷ ರೂಪಾಯಿಗಳು ಡಿ.ಜಿ.ಪಿ. ಕಛೇರಿಗೆ ಬಂದಿದ್ದು ನಿಜ. ಡಿ.ಜಿ. ಮತ್ತು ಐಜಿಪಿಯವರ ಕಛೇರಿಯಲ್ಲಿ ನಿರ್ವಹಿಸುತ್ತಿರುವ ಎಲ್ಲಾ ದಾಖಲೆಗಳ ಪ್ರಕಾರ ಈ ಹಣವನ್ನು 2006ರಿಂದ 2008ರ ಅವಧಿಯಲ್ಲಿ ಕಾರ್ಯ ನಿರ್ವಹಿಸಿದ ಇಬ್ಬರು ಡೈರೆಕಟ್ರ್ ಜನರಲ್ ಮತ್ತು ಇನ್ಸ್‌ಪೆಕ್ಟರ್ ಜನರಲ್ ಆಫ್ ಪೊಲೀಸ್‌ರವರ ಕಾರ್ಯಾವಧಿಯಲ್ಲಿ ಕೆಲ ಸಲಕರಣೆಗಳನ್ನು ಖರೀದಿಸಲು ಹಾಗೂ ಪೊಲೀಸು